ಪಿ.ಸಿ.ಆರ್. ನಂ. 23/2026 ಸಿ.ಡಬ್ಲ್ಯೂ-1

ದಿನಾಂಕಃ 02.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಿರ್ಯಾದುದಾರರ** ಪ್ರಮಾಣೀಕೃತ **ಹೇಳಿಕೆಃ**

ನಾನು ನನ್ನ ಪ್ರಮಾಣೀಕೃತ ಹೇಳಿಕೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಸಾಕ್ಷಿಯು ಮೂಲ ಚೆಕ್ ದಿಃ 19.12.2025 ಮತ್ತು ನಂ. 851470 ನ್ನು ನೋಡಿ ಆರೋಪಿಯ ಸಹಿಯನ್ನು ಗುರುತಿಸಿದ್ದು ಮೂಲ ಚೆಕ್‌ನ್ನು ನಿಪಿ 1 ಎಂದು ಗುರುತಿಸಲಾಯಿತು, ಆರೋಪಿ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು, ಬ್ಯಾಂಕ್ ಮೆಮೋವನ್ನು ನಿಪಿ 2 ಎಂದು ಗುರುತಿಸಲಾಯಿತು, ವಕೀಲರ ಮೂಲಕ ನೀಡಿದ ಲಿಗಲ್ ನೋಟೀಸಿನ ಕಛೇರಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಅಂಚೆ ರಶಿದಿಯನ್ನು ನಿ.ಪಿ.4 ಎಂದು, ತೆರೆದ ನ್ಯಾಯಾಲಯದಲ್ಲಿ ಅಂಚೆ ಲಕೋಟೆಯನ್ನು ತೆರೆದು ನೋಡಲಾಗಿ, ಅಂಚೆ ಲಕೋಟೆಯನ್ನು ನಿ.ಪಿ.5 ಎಂದು, ಅದರಲ್ಲಿರುವ ನೋಟಿಸ್ ಪ್ರತಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಆದ್ದರಿಂದ ಆರೋಪಿ ವಿರುದ್ದ ಕಾನೂನು ಪ್ರಕಾರ ಕ್ರಮ ಜರುಗಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಗುಣವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಸಾ ಓ ಹೇ ಕೇ ಸ ಅದೆ.

1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.